Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

सं. १ नई दिल्ली, शुक्रवार, एप्रील ६, २०१२ वैशाक १७, १९३४ (शका) खंड. ४८
No. 1 New Delhi, Friday, April 6, 2012 Vaishakha 17, 1934 (Saka) Vol. 48
ಸಂ. ೧ ನವ ದೆಹಲಿ, ಶುಕ್ರವಾರ, ಏಪ್ರಿಲ್ ೬, ೨೦೧೨ ವೈಶಾಖ ೧೭, ೧೯೩೪ (ಶಕ) ಸಂಪುಟ. ೪೮

**Ministry of Law and Justice**
(Legislative Department)
New Delhi, 6th April, 2012

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 6ನೇ ಏಪ್ರಿಲ್, 2012**

The Translation in Kannada of the following Acts, namely :- (1) The Energy Conservation Act, 2001 (2) The Haj Committee Act, 2002 (3) The Multi-State Co-operative Societies Act, 2002 (4) The Central Educational Institutions (Reservation in Admission) Act, 2006 (5) The Government Securities Act, 2006 (6) The Science and Engineering Research Board Act, 2008 (7) The Unorganised Workers Social Security Act, 2008 (8) The National Investigation Agency Act, 2008 and (9) The Right of Children to Free and Compulsory Education Act, 2009 - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮ ಎಂದರೆ:- (1) ಇಂಧನ ಶಕ್ತಿ ಸಂರಕ್ಷಣಾ ಅಧಿನಿಯಮ, 2001 (2) ಹಜ್ ಸಮಿತಿ ಅಧಿನಿಯಮ, 2002 (3) ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002 (4) ಕೇಂದ್ರೀಯ ಶಿಕ್ಷಣ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಅಧಿನಿಯಮ, 2006 (5) ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 (6) ವಿಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಮಂಡಳಿ ಅಧಿನಿಯಮ, 2008 (7) ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಅಧಿನಿಯಮ, 2008 (8) ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008 ಮತ್ತು (9) ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 - ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕೇಂದ್ರೀಯ ಶಿಕ್ಷಣ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಅಧಿನಿಯಮ, 2006

(2007ರ ಅಧಿನಿಯಮ ಸಂಖ್ಯೆ 5)

The Central Educational Institutions (Reservation in Admission) Act, 2006

[3ನೇ ಜನವರಿ, 2007]

ಕೇಂದ್ರ ಸರ್ಕಾರವು ಸ್ಥಾಪಿಸಿದ, ನಿರ್ವಹಿಸುತ್ತಿರುವ ಅಥವಾ ಅದರಿಂದ ನೆರವು ಪಡೆಯುತ್ತಿರುವ, ಕೆಲವು ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಮೀಸಲಾತಿಯನ್ನು ಒದಗಿಸುವುದಕ್ಕಾಗಿ, ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು.-** ಈ ಅಧಿನಿಯಮವನ್ನು ಕೇಂದ್ರೀಯ ಶಿಕ್ಷಣ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಅಧಿನಿಯಮ, 2006 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಶೈಕ್ಷಣಿಕ ಅವಧಿ" ಎಂದರೆ ಅಧ್ಯಯನದ ಅಥವಾ ವ್ಯಾಸಂಗದ ಯಾವುದೇ ಶಾಖೆಯಲ್ಲಿ ಬೋಧನೆಗಾಗಿ ಅಥವಾ ಶಿಕ್ಷಣ ನೀಡುವುದಕ್ಕಾಗಿ ಕೇಂದ್ರೀಯ ಶಿಕ್ಷಣ ಸಂಸ್ಥೆಯು ಕ್ಯಾಲೆಂಡರ್ ವರ್ಷದ ಯಾವ ಅವಧಿಯಲ್ಲಿ ಅಥವಾ ಅದರ ಭಾಗದಲ್ಲಿ ತೆರೆದಿರುತ್ತದೋ ಆ ಅವಧಿ;

(ಬಿ) "ವರ್ಷಕ್ಕೆ ಅನುಮತಿಸಿದ ಸಂಖ್ಯೆ" ಎಂದರೆ ಅಧ್ಯಯನದ ಅಥವಾ ವ್ಯಾಸಂಗದ ಪ್ರತಿಯೊಂದು ಶಾಖೆಯಲ್ಲಿ ಬೋಧನೆ ಅಥವಾ ಶಿಕ್ಷಣ ನೀಡುವುದಕ್ಕಾಗಿ ಒಂದು ಕೇಂದ್ರೀಯ ಶಿಕ್ಷಣ ಸಂಸ್ಥೆಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಸಮುಚಿತ ಪ್ರಾಧಿಕಾರವು ಅನುಮತಿಸಿದ ಒಂದು ಪಠ್ಯ ಕ್ರಮದಲ್ಲಿನ ಅಥವಾ ಶಿಕ್ಷಣ ಕ್ರಮದಲ್ಲಿನ ಸೀಟುಗಳ ಸಂಖ್ಯೆ;

(ಸಿ) "ಸಮುಚಿತ ಪ್ರಾಧಿಕಾರ" ಎಂದರೆ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ, ಭಾರತದ ಬಾರ್ ಕೌನ್ಸಿಲ್, ಭಾರತದ ವೈದ್ಯಕೀಯ ಪರಿಷತ್ತು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಥವಾ ಯಾವುದೇ ಕೇಂದ್ರೀಯ ಶಿಕ್ಷಣ ಸಂಸ್ಥೆಯಲ್ಲಿ ಉನ್ನತ ಶಿಕ್ಷಣದ ಗುಣಮಟ್ಟಗಳನ್ನು ನಿರ್ಧರಿಸುವುದಕ್ಕಾಗಿ, ಸಮನ್ವಯಗೊಳಿಸುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಿದ ಯಾವುದೇ ಇತರ ಪ್ರಾಧಿಕಾರ ಅಥವಾ ನಿಕಾಯ;

(ಡಿ) " ಕೇಂದ್ರೀಯ ಶಿಕ್ಷಣ ಸಂಸ್ಥೆ" ಎಂದರೆ:-

(i) ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಿದ ಅಥವಾ ನಿಗಮಿತಗೊಳಿಸಿದ ಒಂದು ವಿಶ್ವವಿದ್ಯಾನಿಲಯ;

(ii) ಸಂಸತ್ತಿನ ಒಂದು ಅಧಿನಿಯಮದ ಮೂಲಕ ಸ್ಥಾಪಿಸಿದ ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಸಂಸ್ಥೆ;

(iii) ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ ಅಧಿನಿಯಮ, 1956ರ (1956ರ 3) 3ನೇ ಪ್ರಕರಣದ ಮೇರೆಗೆ ಡೀಮ್ಡ್ ವಿಶ್ವವಿದ್ಯಾನಿಲಯವೆಂದು ಘೋಷಿಸಿದ ಮತ್ತು ಕೇಂದ್ರ ಸರ್ಕಾರವು ನಿರ್ವಹಿಸುತ್ತಿರುವ ಅಥವಾ ಅದರಿಂದ ನೆರವು ಪಡೆಯುತ್ತಿರುವ ಸಂಸ್ಥೆ;

(iv) ಕೇಂದ್ರ ಸರ್ಕಾರವು ನಿರ್ವಹಿಸುತ್ತಿರುವ ಅಥವಾ ಅದರಿಂದ ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ನೆರವು ಪಡೆಯುತ್ತಿರುವ ಹಾಗೂ (i)ನೇ ಖಂಡದಲ್ಲಿ ಅಥವಾ (ii)ನೇ ಖಂಡದಲ್ಲಿ ಉಲ್ಲೇಖಿಸಿದ ಸಂಸ್ಥೆಗೆ ಸಂಯೋಜನೆಗೊಂಡಿರುವ ಅಥವಾ (iii)ನೇ ಖಂಡದಲ್ಲಿ ಉಲ್ಲೇಖಿಸಿದ ಸಂಸ್ಥೆಯ ಪ್ರಾತಿನಿಧಿಕ ಘಟಕವಾಗಿರುವ ಸಂಸ್ಥೆ;

(v) ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ (1860ರ 21) ಮೇರೆಗೆ ಕೇಂದ್ರ ಸರ್ಕಾರವು ಸ್ಥಾಪಿಸಿದ ಶಿಕ್ಷಣ ಸಂಸ್ಥೆ;

(ಇ) "ವ್ಯಾಸಂಗ ವಿಭಾಗ" ಎಂದರೆ ಕೇಂದ್ರೀಯ ಶಿಕ್ಷಣ ಸಂಸ್ಥೆಯ ವ್ಯಾಸಂಗ ವಿಭಾಗ;

(ಎಫ್) "ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ" ಎಂದರೆ, ಸಂವಿಧಾನದ 30ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಅಲ್ಪಸಂಖ್ಯಾತರು ಸ್ಥಾಪಿಸಿದ ಮತ್ತು ಆಡಳಿತ ನಡೆಸುತ್ತಿರುವ ಹಾಗೂ ಸಂಸತ್ತಿನ ಅಧಿನಿಯಮದ ಮೂಲಕ ಅಥವಾ ಕೇಂದ್ರ ಸರ್ಕಾರವು ಹಾಗೆ ಘೋಷಿಸಿದ ಅಥವಾ ರಾಷ್ಟ್ರೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಆಯೋಗ ಅಧಿನಿಯಮ, 2004ರ (2005ರ 2) ಮೇರೆಗೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯೆಂದು ಘೋಷಿಸಿದ ಸಂಸ್ಥೆ;

(ಜಿ) "ಇತರ ಹಿಂದುಳಿದ ವರ್ಗಗಳು" ಎಂದರೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಮತ್ತು ಕೇಂದ್ರ ಸರ್ಕಾರವು ಹಾಗೆ ನಿರ್ಧರಿಸಿದ ನಾಗರಿಕರ ವರ್ಗ ಅಥವಾ ವರ್ಗಗಳು;

(ಹೆಚ್) "ಅನುಸೂಚಿತ ಜಾತಿಗಳು" ಎಂದರೆ ಸಂವಿಧಾನದ 341ನೇ ಅನುಚ್ಛೇದದ ಮೇರೆಗೆ ಅಧಿಸೂಚಿಸಿದ ಅನುಸೂಚಿತ ಜಾತಿಗಳು;

(ಐ) "ಅನುಸೂಚಿತ ಬುಡಕಟ್ಟುಗಳು" ಎಂದರೆ ಸಂವಿಧಾನದ 342ನೇ ಅನುಚ್ಛೇದದ ಮೇರೆಗೆ ಅಧಿಸೂಚಿಸಿದ ಅನುಸೂಚಿತ ಬುಡಕಟ್ಟುಗಳು;

(ಜೆ) "ಅಧ್ಯಯನದ ಯಾವುದೇ ಶಾಖೆಯಲ್ಲಿ ಬೋಧನೆ ಅಥವಾ ಶಿಕ್ಷಣ" ಎಂದರೆ ಬ್ಯಾಚೆಲರ್ (ಸ್ನಾತಕ), ಮಾಸ್ಟರ್ಸ್ (ಸ್ನಾತಕೋತ್ತರ) ಮತ್ತು ಡಾಕ್ಟರಲ್ ಪದವಿ ಹಂತಗಳಲ್ಲಿನ ವಿದ್ಯಾರ್ಹತೆಗಳ ಮೂರು ಪ್ರಧಾನ ಹಂತಗಳಿಗೆ ಅನುವು ಮಾಡಿಕೊಡುವ, ಒಂದು ಅಧ್ಯಯನ ಶಾಖೆಯಲ್ಲಿ ನೀಡಲಾಗುವ ಬೋಧನೆ ಅಥವಾ ಶಿಕ್ಷಣ.

**3. ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳ ಮೀಸಲಾತಿ.**– ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ, ಪ್ರವೇಶದಲ್ಲಿ ಸೀಟುಗಳ ಮೀಸಲಾತಿಯನ್ನು ಮತ್ತು ಅದರ ಪ್ರಮಾಣವನ್ನು ಈ ಮುಂದಿನ ರೀತಿಯಲ್ಲಿ ಒದಗಿಸತಕ್ಕದ್ದು, ಎಂದರೆ:–

(i) ಅಧ್ಯಯನದ ಅಥವಾ ವ್ಯಾಸಂಗ ವಿಭಾಗದ ಪ್ರತಿಯೊಂದು ಶಾಖೆಯಲ್ಲಿ ವರ್ಷಕ್ಕೆ ಅನುಮತಿಸಿದ ಸಂಖ್ಯೆಯಲ್ಲಿ, ಶೇಕಡ ಹದಿನೈದರಷ್ಟು ಸೀಟುಗಳನ್ನು ಅನುಸೂಚಿತ ಜಾತಿಗಳಿಗೆ ಮೀಸಲಿಡತಕ್ಕದ್ದು.

(ii) ಅಧ್ಯಯನದ ಅಥವಾ ವ್ಯಾಸಂಗ ವಿಭಾಗದ ಪ್ರತಿಯೊಂದು ಶಾಖೆಯಲ್ಲಿ ವರ್ಷಕ್ಕೆ ಅನುಮತಿಸಿದ ಸಂಖ್ಯೆಯಲ್ಲಿ, ಶೇಕಡ ಏಳೂವರೆಯಷ್ಟು ಸೀಟುಗಳನ್ನು ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಡತಕ್ಕದ್ದು.

(iii) ಅಧ್ಯಯನದ ಅಥವಾ ವ್ಯಾಸಂಗ ವಿಭಾಗದ ಪ್ರತಿಯೊಂದು ಶಾಖೆಯಲ್ಲಿ ವರ್ಷಕ್ಕೆ ಅನುಮತಿಸಿದ ಸಂಖ್ಯೆಯಲ್ಲಿ, ಶೇಕಡ ಇಪ್ಪತ್ತೇಳರಷ್ಟು ಸೀಟುಗಳನ್ನು ಇತರ ಹಿಂದುಳಿದ ವರ್ಗಗಳಿಗೆ ಮೀಸಲಿಡತಕ್ಕದ್ದು.

**4. ಕೆಲವು ಸಂದರ್ಭಗಳಲ್ಲಿ ಅಧಿನಿಯಮ ಅನ್ವಯವಾಗದಿರುವುದು.–** ಈ ಅಧಿನಿಯಮದ 3ನೇ ಪ್ರಕರಣದ ಉಪಬಂಧಗಳು,–

(ಎ) ಸಂವಿಧಾನದ ಆರನೇ ಅನುಸೂಚಿಯಲ್ಲಿ ಉಲ್ಲೇಖಿಸಿದ ಬುಡಕಟ್ಟು ಪ್ರದೇಶಗಳಲ್ಲಿ ಸ್ಥಾಪಿಸಿದ ಕೇಂದ್ರೀಯ ಶಿಕ್ಷಣ ಸಂಸ್ಥೆಗೆ;

(ಬಿ) ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಉತ್ಕೃಷ್ಟ ಸಂಸ್ಥೆಗಳಿಗೆ, ಸಂಶೋಧನಾ ಸಂಸ್ಥೆಗಳಿಗೆ, ರಾಷ್ಟ್ರೀಯ ಮತ್ತು ತಂತ್ರಗಾರಿಕೆ ಪ್ರಾಮುಖ್ಯತೆಯ ಸಂಸ್ಥೆಗಳಿಗೆ:

ಪರಂತು, ಕೇಂದ್ರ ಸರ್ಕಾರವು ಅವಶ್ಯಕವೆಂದು ಪರಿಗಣಿಸಿದಾಗಲೆಲ್ಲಾ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು;

(ಸಿ) ಈ ಅಧಿನಿಯಮದಲ್ಲಿ ಪರಿಭಾಷಿಸಿರುವಂಥ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗೆ;

(ಡಿ) ಸಮುಚಿತ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಧ್ಯಯನದ ಅಥವಾ ವ್ಯಾಸಂಗ ವಿಭಾಗದ ಯಾವುದೇ ಶಾಖೆಯಲ್ಲಿ ಪೋಸ್ಟ್ ಡಾಕ್ಟರಲ್ ಹಂತವನ್ನು ಒಳಗೊಂಡು, ವಿಶೇಷ ಪ್ರಾವೀಣ್ಯತೆಯ ಉನ್ನತ ಹಂತಗಳಲ್ಲಿನ ಪಠ್ಯ ಕ್ರಮಕ್ಕೆ ಅಥವಾ ಶಿಕ್ಷಣ ಕ್ರಮಗಳಿಗೆ

– ಅನ್ವಯವಾಗತಕ್ಕದ್ದಲ್ಲ.

**5. ಸೀಟುಗಳ ಕಡ್ಡಾಯ ಹೆಚ್ಚಳ.–** (1) 3ನೇ ಪ್ರಕರಣದ (iii)ನೇ ಖಂಡದಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಯೊಂದು ಕೇಂದ್ರೀಯ ಶಿಕ್ಷಣ ಸಂಸ್ಥೆಯು ಸಮುಚಿತ ಪ್ರಾಧಿಕಾರದ ಪೂರ್ವಾನುಮೋದನೆ ಪಡೆದು, ಅನುಸೂಚಿತ ಜಾತಿಗಳ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಹಿಂದುಳಿದ ವರ್ಗಗಳ ವ್ಯಕ್ತಿಗಳಿಗೆ ಮೀಸಲಿರಿಸಿರುವಂಥ ಸೀಟುಗಳನ್ನು ಹೊರತುಪಡಿಸಿ ಸೀಟುಗಳ ಸಂಖ್ಯೆಯು ಈ ಅಧಿನಿಯಮವು ಜಾರಿಗೆ ಬರುವ ದಿನಾಂಕದ ನಿಕಟಪೂರ್ವದಲ್ಲಿ ವ್ಯಾಸಂಗ ಅವಧಿಗೆ ಲಭ್ಯವಿದ್ದಂಥ ಸೀಟುಗಳ ಸಂಖ್ಯೆಗಿಂತ ಕಡಿಮೆಯಾಗದ ಹಾಗೆ ಅಧ್ಯಯನದ ಅಥವಾ ವ್ಯಾಸಂಗ ವಿಭಾಗದ ಒಂದು ಶಾಖೆಯಲ್ಲಿನ ಸೀಟುಗಳ ಸಂಖ್ಯೆಯನ್ನು ವರ್ಷಕ್ಕೆ ಅನುಮತಿಸಿದ ತನ್ನ ಸೀಟುಗಳ ಸಂಖ್ಯೆಗಿಂತ ಮೀರಿ ಹೆಚ್ಚಿಸತಕ್ಕದ್ದು.

(2) ಕೇಂದ್ರ ಸರ್ಕಾರವು ಸಮುಚಿತ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಯಾವುದೇ ಕೇಂದ್ರೀಯ ಶಿಕ್ಷಣ ಸಂಸ್ಥೆಯ ಮನವಿಯ ಮೇಲೆ ಆರ್ಥಿಕ, ಭೌತಿಕ ಅಥವಾ ಶೈಕ್ಷಣಿಕ ಪರಿಮಿತಿಗಳ ಕಾರಣಗಳಿಂದಾಗಿ ಅಥವಾ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದಕ್ಕಾಗಿ, ಅಂಥ ಸಂಸ್ಥೆಯ ಅಧ್ಯಯನದ ಅಥವಾ ವ್ಯಾಸಂಗ ವಿಭಾಗದ ಯಾವುದೇ ಶಾಖೆಯಲ್ಲಿನ ವರ್ಷಕ್ಕೆ ಅನುಮತಿಸಿದ ಸೀಟುಗಳ ಸಂಖ್ಯೆಯನ್ನು ಈ ಅಧಿನಿಯಮದ ಪ್ರಾರಂಭದ ನಂತರದ ವ್ಯಾಸಂಗ ಅವಧಿಗೆ ಹೆಚ್ಚಿಸಲು ಸಾಧ್ಯವಿಲ್ಲವೆಂದು ಮನವರಿಕೆ ಮಾಡಿಕೊಂಡಲ್ಲಿ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಪ್ರಾರಂಭದ ತರುವಾಯದ ವ್ಯಾಸಂಗ ಅವಧಿಯೊಂದಿಗೆ ಆರಂಭವಾಗುವ ಮೂರು ವರ್ಷಗಳ ಗರಿಷ್ಠ ಅವಧಿಗೆ ವರ್ಷಕ್ಕೆ ಅನುಮತಿಸಿದ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಅಂಥ ಸಂಸ್ಥೆಗೆ ಅನುಮತಿ ನೀಡಬಹುದು; ಮತ್ತು ನಂತರ, 3ನೇ ಪ್ರಕರಣದ (iii)ನೇ ಖಂಡದಲ್ಲಿ ಉಪಬಂಧಿಸಿದಂತೆ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಪ್ರಮಾಣವನ್ನು, ಪ್ರತಿಯೊಂದು ಶೈಕ್ಷಣಿಕ ಅವಧಿಗೆ ಇತರ ಹಿಂದುಳಿದ ವರ್ಗಗಳಿಗೆ ಲಭ್ಯವಿರುವ ಸೀಟುಗಳ ಸಂಖ್ಯೆಯು ಪ್ರತಿಯೊಂದು ವರ್ಷಕ್ಕೆ ಅನುಮತಿಸಿದ ಸಂಖ್ಯೆಯಲ್ಲಾದ ಹೆಚ್ಚಳಕ್ಕೆ ಅನುಗುಣವಾಗಿರುವಂಥ ರೀತಿಯಲ್ಲಿ ಆ ಶೈಕ್ಷಣಿಕ ಅವಧಿಗೆ ಸೀಮಿತಗೊಳಿಸತಕ್ಕದ್ದು.

**6. 2007ನೇ ಕ್ಯಾಲೆಂಡರ್ ವರ್ಷದಲ್ಲಿ ಪ್ರಾರಂಭವಾಗುವ ಪ್ರವೇಶಗಳಲ್ಲಿ ಸೀಟುಗಳ ಮೀಸಲಾತಿ.**–ಕೇಂದ್ರೀಯ ಶಿಕ್ಷಣ ಸಂಸ್ಥೆಗಳು, 2007ನೇ ಕ್ಯಾಲೆಂಡರ್ ವರ್ಷದಲ್ಲಿ ಮತ್ತು ಆ ವರ್ಷದಿಂದ ಪ್ರಾರಂಭವಾಗುವ, ಅದರ ವ್ಯಾಸಂಗ ಅವಧಿಗಳಿಗೆ ಪ್ರವೇಶಗಳಲ್ಲಿ ಸೀಟುಗಳ ಮೀಸಲಾತಿಯ ಉದ್ದೇಶಕ್ಕಾಗಿ ಈ ಅಧಿನಿಯಮದ 3, 4 ಮತ್ತು 5ನೇ ಪ್ರಕರಣಗಳ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅಗತ್ಯವಿರುವ ಎಲ್ಲ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**7. ಸಂಸತ್ತಿನ ಮುಂದೆ ಅಧಿಸೂಚನೆಗಳನ್ನು ಇಡುವುದು.**– ಈ ಅಧಿನಿಯಮದ ಮೇರೆಗೆ ಮಾಡಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು; ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಅಧಿಸೂಚನೆಯು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ಅಧಿಸೂಚನೆಯ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

150

5113

## ಅನುಸೂಚಿ

## [4(ಬಿ) ಪ್ರಕರಣವನ್ನು ನೋಡಿ]

| ಕ್ರಮ ಸಂಖ್ಯೆ | ಉತ್ಕೃಷ್ಟ ಸಂಸ್ಥೆಗಳ, ಇತ್ಯಾದಿಗಳ ಹೆಸರುಗಳು |
|---|---|
| 1. | ಹೋಮಿ ಭಾಭಾ ರಾಷ್ಟ್ರೀಯ ಸಂಸ್ಥೆ, ಮುಂಬಯಿ ಮತ್ತು ಅದರ ಪ್ರಾತಿನಿಧಿಕ ಘಟಕಗಳು, ಎಂದರೆ:– |
| | (i) ಭಾಭಾ ಪರಮಾಣು ಸಂಶೋಧನಾ ಕೇಂದ್ರ, ಟ್ರಾಂಬೆ |
| | (ii) ಇಂದಿರಾಗಾಂಧಿ ಪರಮಾಣು ಸಂಶೋಧನಾ ಕೇಂದ್ರ, ಕಲ್ಪಾಕ್ಕಂ; |
| | (iii) ರಾಜಾರಾಮಣ್ಣ ಉನ್ನತ ತಂತ್ರಜ್ಞಾನ ಕೇಂದ್ರ, ಇಂದೋರ್; |
| | (iv) ಪ್ಲಾಸ್ಮಾ ಸಂಶೋಧನಾ ಸಂಸ್ಥೆ, ಗಾಂಧಿನಗರ; |
| | (v) ವೇರಿಯೆಬಲ್ ಎನರ್ಜಿ ಸೈಕ್ಲೋಟ್ರಾನ್ ಸೆಂಟರ್, ಕೋಲ್ಕತ; |
| | (vi) ಸಹಾ ಅಣುಭೌತ ವಿಜ್ಞಾನ ಸಂಸ್ಥೆ, ಕೋಲ್ಕತ; |
| | (vii) ಭೌತವಿಜ್ಞಾನ ಸಂಸ್ಥೆ, ಭುವನೇಶ್ವರ; |
| | (viii) ಗಣಿತೀಯ ವಿಜ್ಞಾನ ಸಂಸ್ಥೆ, ಚೆನ್ನೈ; |
| | (ix) ಹರೀಶ್–ಚಂದ್ರ ಸಂಶೋಧನಾ ಸಂಸ್ಥೆ, ಅಲಹಾಬಾದ್; |
| | (x) ಟಾಟಾ ಸ್ಮಾರಕ ಕೇಂದ್ರ, ಮುಂಬಯಿ; |
| 2. | ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ, ಮುಂಬಯಿ, |
| 3. | ಇಂದಿರಾಗಾಂಧಿ ಈಶಾನ್ಯ ಪ್ರಾದೇಶಿಕ ಆರೋಗ್ಯ ಮತ್ತು ವೈದ್ಯಕೀಯ ವಿಜ್ಞಾನ ಸಂಸ್ಥೆ, ಶಿಲ್ಲಾಂಗ್. |
| 4. | ರಾಷ್ಟ್ರೀಯ ಮಿದುಳು ಸಂಶೋಧನಾ ಕೇಂದ್ರ, ಮಾನೇಸರ್, ಗುರ್‌ಗಾಂವ್ |
| 5. | ಜವಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ, ಬೆಂಗಳೂರು. |
| 6. | ಭೌತ ವಿಜ್ಞಾನ ಸಂಶೋಧನಾ ಪ್ರಯೋಗಾಲಯ, ಅಹಮದಾಬಾದ್. |
| 7. | ಬಾಹ್ಯಾಕಾಶ ಭೌತ ವಿಜ್ಞಾನ ಪ್ರಯೋಗಾಲಯ, ತಿರುವನಂತಪುರಂ. |
| 8. | ಭಾರತೀಯ ದೂರ ಸಂವೇದಿ ಸಂಸ್ಥೆ, ಡೆಹರಾಡೂನ್. |

* * * * *